ಸರಿಯಿದೆ. ಪ್ರಧಾನ ವಾಸ್ತು ಶಿಲ್ಪಿಗಳಿಂದ ನಿರ್ದಿಷ್ಟವಾದ ವಿನ್ಯಾಸ ಆಗುತ್ತಿದ್ದಂತೆಯೇ, ಇದಕ್ಕೆ ಹಣವೂ ರೆಡಿಯಿದ್ದು, ಭೂಮಿ ವ್ಯವಸ್ಥೆ ಮಾಡಿ–ಕೊಂಡು ಖಂಡಿತಾ ಮಾಡಿಕೊಡುತ್ತೇವೆ.

ಅಧ್ಯಕ್ಷರು :– ಶ್ರೀ ಪ್ರಕಾಶ್ ಹುಕ್ಕೇರಿಯವರು,

ಶ್ರೀ ಸೈಯದ್ ಯಾಸೀನ್ :– Thanks Sir, Land...

ಅಧ್ಯಕ್ಷರು :– No, ಇದು Calling attention Please

ಶ್ರೀ ಸೈಯದ್ ಯಾಸೀನ್ :– Land is available, unnecessarily ಖರೀದಿ ಮಾಡುವುದಕ್ಕೆ ಏಕೆ ನಿಧಾನವಾಗುತ್ತಿದೆ?

10. ವಿಷಯ : ಬೆಳಗಾವಿ ಜಿಲ್ಲೆ ಚಿಕ್ಕೋಡಿ ದೂಧ್‌ಗಂಗಾ ಕೃಷ್ಣ ಸಹಕಾರಿ ಸಕ್ಕರೆ ಕಾರ್ಖಾನೆಯಿಂದ ಕೃಷಿ ಅಭಿವೃದ್ಧಿ ಯೋಜನೆಯಡಿ ನೀಡಲಾಗಿದ್ದ ಸಾಲವನ್ನು ಕೇಂದ್ರ ಸರ್ಕಾರ ವಿದರ್ಭ ಪ್ಯಾಕೇಜ್–ಘೋಷಣೆ ಮಾಡಿ ಮನ್ನಾ ಮಾಡಿದ್ದು, ಸಾಲ ಪಡೆದ ರೈತರುಗಳಿಗೆ ಬ್ಯಾಂಕುಗಳು ಯಾವುದೇ ತರಹದ ಲೆಕ್ಕ ಪತ್ರಗಳನ್ನು ತೋರಿಸದೇ ಅವ್ಯವಹಾರವಾಗಿರುವ ಬಗ್ಗೆ.

ಶ್ರೀ ಪ್ರಕಾಶ್ ಬಾಬಣ್ಣ ಹುಕೇರಿ (ಚಿಕ್ಕೋಡಿ–ಸದಲಗ) :– ಬೆಳಗಾವಿ ಜಿಲ್ಲೆ ಚಿಕ್ಕೋಡಿ ದೂಧ್‌ಗಂಗಾ ಕೃಷ್ಣ ಸಹಕಾರಿ ಸಕ್ಕರೆ ಕಾರ್ಖಾನೆಯಿಂದ ಕೃಷಿ ಅಭಿವೃದ್ಧಿ ಯೋಜನೆಯಡಿ ನೀಡಲಾಗಿದ್ದ ಸಾಲವನ್ನು ಕೇಂದ್ರ ಸರ್ಕಾರ ವಿದರ್ಭ ಪ್ಯಾಕೇಜ್ ಘೋಷಣೆ ಮಾಡಿ ಮನ್ನಾ ಮಾಡಿದ್ದು, ಸಾಲ ಪಡೆದ ರೈತರುಗಳಿಗೆ ಬ್ಯಾಂಕುಗಳು ಯಾವುದೇ ತರಹದ ಲೆಕ್ಕ ಪತ್ರಗಳನ್ನು ತೋರಸದೇ ಅವ್ಯವಹಾ–ರವಾಗಿರುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯ ಬಯಸುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಸಚಿವರು) (ಮಾನ್ಯ ಮುಖ್ಯಮಂತ್ರಿಯವರ ಪರವಾಗಿ):– ಮಾನ್ಯ ಅಧ್ಯಕ್ಷರೆ,ಬೆಳಗಾವಿ ಜಿಲ್ಲೆಯ ಶ್ರೀ ದೂಧ್‌ಗಂಗಾಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆಯ ಮಧ್ಯಸ್ಥಿಕೆಯಲ್ಲಿ 1999–2000 ದ ಸಾಲಿನಲ್ಲಿ 6962 ರೈತ ಸದಸ್ಯರಿಗೆ ರಾಷ್ಟ್ರೀಕೃತ ಬ್ಯಾಂಕುಗಳಿಂದ "ಕೃಷಿ ಅಭಿವೃದ್ಧಿ ಯೋಜನೆ" ಅಡಿಯಲ್ಲಿ ಒಟ್ಟು ರೂ. 16,13,10,000/– ಸಾಲ ನೀಡಲಾಗಿತ್ತು ಎಂದು ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕರು ವರದಿ ಮಾಡಿರುವರು. ಬ್ಯಾಂಕುವಾರು ವಿವರಗಳನ್ನು ಕೆಳಗೆ ನೀಡಿದೆ.

St No	Name of the Bank	No.of Members availed	Loan Amount (Rs.)
1	State Bank of India Br Nippani	759	17840000.00
2	State Bank of India ADB Br Chikodi	1857	43580000.00
3	United Westeren Bank, Nippani	2727	62445000.00
4	Syndicate Bank Br Sadalaga	458	10615000.00
5	Syndicate Bank Br Jugul	538	12380000.00
6	Syndicate Bank Br Soundatti	571	13245000.00
7	Syndicate Bank Br Akkol	52	1205000.00
		6962	161310000.00

ಈ ಸಾಲವನ್ನು ತುಂಬಲು 5 ವರ್ಷಗಳ ಕಾಲಾವಕಾಶ ನೀಡಲಾಗಿತ್ತು. ಈ ಯೋಜನೆಯಡಿ ಸಾಲ ಪಡೆದುಕೊಂಡು ರೈತ ಸದಸ್ಯರಿಂದ (1) ಅವರು ಕಾರ್ಖಾನೆಗೆ ಕಬ್ಬು ಪೂರೈಸಿದ ಬಿಲ್ಲಿನಲ್ಲಿ (2) ನಗದು ರೂಪದಲ್ಲಿ ಹಾಗೂ (3) ಜಾಮೀನುದರರುಗಳಿಂದ ಹಣ ವಸೂಲಿ ಮಾಡಿ ಹೊಂದಾಣಿಕೆ ಮಾಡಿ ಕೊಳ್ಳುವ ಮೂಲಕ ಒಟ್ಟು ರೂ.2,03,491,844/- ಗಳನ್ನು ವಸೂಲಿ ಮಾಡಲಾಗಿದೆ ಎಂದು ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕರು ವರದಿ ಮಾಡಿರುವರು.

ವಿವರಗಳು ಈ ಕೆಳಕಂಡಂತಿದೆ.

ಕ್ರ ಸಂ.	ವಿವರ	ಸದಸ್ಯರುಗಳ ಸಂಖ್ಯೆ	ಸಾಲ ವಸೂಲಾತಿ ವಿವರ		
			ಅಸಲು	ಬಡ್ಡಿ	ಒಟ್ಟು
1	ಕಬ್ಬು ಬಿಲ್ಲಿನಲ್ಲಿ ಕಟಾವಣೆ ಮೂಲಕ	6526	126812060	43423239	170235299
2	ನಗದು ಹಣ	2648	19803116	6258491	26061607
3	ಹೊಂದಾಣಿಕೆ ಮೂಲಕ	1085	4597338	2597600	7194938
	ಒಟ್ಟು		151212514	52279330	203491844
ಇದಲ್ಲದೆ 572 ಸದಸ್ಯರು ಒಟ್ಟು ರೂ.60,59,513/-ಗಳನ್ನು (ಅಸಲು ರೂ.4051428/- ಬಡ್ಡಿ ರೂ.2008085/- ಒಟ್ಟು ರೂ.6059513/-) ನೇರವಾಗಿ ಬ್ಯಾಂಕಿಗೆ ಪಾವತಿ ಮಾಡಿರುತ್ತಾರೆ.					

ಕೃಷಿ ಅಭಿವೃದ್ಧಿ ಯೋಜನೆ ಅಡಿ ಸಾಲ ಪಡೆದುಕೊಂಡಿರುವ ರೈತರುಗಳಿಂದ ಕಾರ್ಖಾನೆಯು ವಸೂಲ್ಮಾಡಿದ ರೂ.2034.91 ಲಕ್ಷಗಳಲ್ಲಿ 1876.97 ಲಕ್ಷಗಳನ್ನು ಬ್ಯಾಂಕಿಗೆ ಮರುಪಾವತಿ ಮಾಡಿದೆ. ವ್ಯಕ್ತಿಗತವಾಗಿ ರೈತರುಗಳಿಂದ ಸಾಲ ವಸೂಲು ಮಾಡಿದ ದಿನಾಂಕ ಹಾಗೂ ಮೊತ್ತದ ವಿವರಗಳು ಕಾರ್ಖಾನೆಯಲ್ಲಿ ನಿರ್ವಹಿಸಲಾಗಿರುತ್ತದೆ ಎಂಬ ಅಂಶವನ್ನು ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕರು ವರದಿ ನೀಡಿರುತ್ತಾರೆ.

ರೈತ ಸದಸ್ಯರ ಬಾಕಿ ಉಳಿದ ಸಾಲವನ್ನು ಕೇಂದ್ರ ಸರ್ಕಾರವು ಸಾಲ ಮನ್ನಾ ಮಾಡಿದ ವಿವರ ಆಯಾ ಬ್ಯಾಂಕುಗಳೇ ನಿರ್ವಹಿಸಿರುವುದರಿಂದ ಸದರಿ ಮಾಹಿತಿ ಕಾರ್ಖಾನೆಯಲ್ಲಿ ಲಭ್ಯವಿರುವುದಿಲ್ಲ. ಕೃಷಿ ಅಭಿವೃದ್ಧಿ ಯೋಜನೆಯಡಿ ಪಡೆದು ಕೊಂಡ ಸಾಲವನ್ನು ಪೂರ್ಣವಾಗಿ ಪಾವತಿ ಮಾಡಿ ಬ್ಯಾಂಕ್‌ಗಳಿಂದ ಬೇಬಾಕಿ ಪ್ರಮಾಣ ಪತ್ರ ಪಡೆದುಕೊಂಡು ದಾಖಲೆಗಳನ್ನು ಕಾರ್ಖಾನೆಗೆ ಒದಗಿಸಿರುವ 1970 ರೈತ ಸದಸ್ಯರುಗಳಿಗೆ ರೂ.147.14 ಲಕ್ಷಗಳನ್ನು ರೈತರುಗಳಿಗೆ ಹಿಂದಿರುಗಿಸಲಾಗಿದೆ ಎಂದು ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕರು ವರದಿ ಮಾಡಿರುವರು.

ಶ್ರೀ ದೂಧ್‌ಗಂಗಾ ಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆಯು ರಾಜ್ಯದ ಬೆಳಗಾವಿ ಜಿಲ್ಲೆಯ ಚಿಕ್ಕೊಡಿಯಲ್ಲಿ ನೆಲೆಗೊಂಡಿದ್ದು, ಈ ಕಾರ್ಖಾನೆ multi-state permit ನ್ನು ಹೊಂದಿರುತ್ತದೆ. ಮೇಲ್ಕಂಡ ರಾಷ್ಟ್ರೀಕೃತ ಬ್ಯಾಂಕುಗಳು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಒಳಪಟ್ಟಿದ್ದು, ಸದರಿ ಬ್ಯಾಂಕುಗಳ ಅಧಿಕಾರಿಗಳು ಲೆಕ್ಕಪತ್ರ ತೋರಿಸದೇ ಇರುವ ಬಗ್ಗೆ ಹಾಗೂ ಅಲ್ಲಿ ಅವ್ಯವಹಾರವಾಗಿರುವ ಬಗ್ಗೆ ರಾಜ್ಯ ಸರ್ಕಾರವು ನೇರವಾಗಿ ಕ್ರಮ ಕೈಗೊಳ್ಳಲು ಬರುವುದಿಲ್ಲ. ಆದಾಗ್ಯೂ, ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದು ಕೋರಲಾಗುವುದು.

ಅಧ್ಯಕ್ಷರು :– clarification ಇದ್ದರೆ ಕೇಳಿ.

ಶ್ರೀ ಪ್ರಕಾಶ್ ಬಾಬಣ್ಣ ಹುಕೇರಿ :– ದೂಧ್‌ಗಂಗಾ ಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆ ಮಧ್ಯಸ್ಥಿಕೆಯಲ್ಲಿ ಒಟ್ಟು 6,952 ಜನರಿಗೆ ತಲಾ 25,000 ರೂ.ಗಳಂತೆ 16 ಕೋಟಿ ರೂ.ಗಳನ್ನು ಏಳು ಬ್ಯಾಂಕುಗಳಿಂದ ಸಾಲವನ್ನು ಕೊಟ್ಟಿದ್ದರು. ಆ ನಂತರ ದೂಧ್‌ಗಂಗಾ ಸಕ್ಕರೆ ಕಾರ್ಖಾನೆಯವರು, ರೈತರು

ಏನು ಕಬ್ಬನ್ನು ಕಾರ್ಖಾನೆಗೆ ಪೂರೈಸುತ್ತಾರೋ, ಅವರು ಅಸಲನ್ನು ಹಾಗೂ ಬಡ್ಡಿಯನ್ನು ಹಿಡಿದುಕೊಂಡು ಬ್ಯಾಂಕಿಗೆ ದುಡ್ಡನ್ನು ಕಟ್ಟಿದ್ದಾರೆ. ಆಮೇಲೆ 'ವಿಧರ್ಭ ಪ್ಯಾಕೇಜ್' ಬಂದಿದ್ದರಿಂದ ರೈತರಿಗೆ ಸಾಲ ಮನ್ನಾ ಮಾಡಲು ಆ ಪ್ಯಾಕೇಜ್‌ನಡಿ ಅವಕಾಶವಿತ್ತು. ಸಾಲ ಪೂರೈಸಿದ 7 ರಾಷ್ಟ್ರೀಕೃತ ಬ್ಯಾಂಕುಗಳನ್ನು ಕೇಳುತ್ತಿರುವುದೇನೆಂದರೆ ವಿಧರ್ಭ ಪ್ಯಾಕೇಜ್‌ನಡಿ ಇರುವ 6,952 ರೈತರು ಎಷ್ಟು ಸದುಪಯೋಗ ಮಾಡಿಕೊಂಡಿದ್ದಾರೆನ್ನುವುದನ್ನು ಕಳೆದ ಮೂರು ಸಾರಿಯಿಂದಲೂ ಅಧ್ಯಕ್ಷರ ಗಮನಕ್ಕೂ ಸಹ ತಂದಿದ್ದೇನೆ. ಆ ಪ್ಯಾಕೇಜ್‌ನಡಿ ಎಷ್ಟು ಜನರು ಅವಕಾಶಗಳನ್ನು ಪಡೆದಿದ್ದಾರೆ, ಎಷ್ಟು ಜನರ ಬಡ್ಡಿ ಮತ್ತು ಅಸಲನ್ನು ವಾಪಸ್ಸು ತೆಗೆದುಕೊಂಡಿದ್ದೀರಿ? ಎಷ್ಟು ಜನರಿಗೆ ವಾಪಸ್ಸು ಕೊಟ್ಟಿದ್ದೀರಿ ಎಂದು ಕೇಳಿದ್ದರೆ, ನೀವು ಅದಕ್ಕೆ ರಾಷ್ಟ್ರೀಕೃತ ಬ್ಯಾಂಕುಗಳಾಗಿರುವುದರಿಂದ ಆ ಬಗ್ಗೆ ವಿಚಾರ ಮಾಡುವುದಕ್ಕೆ ಆಗುವುದಿಲ್ಲವೆಂದು ಉತ್ತರ ನೀಡಿದ್ದೀರಿ. ಇದೆಂತಹ ಉತ್ತರವೆಂದು ಅರ್ಥವಾಗುತ್ತಿಲ್ಲ. ಸರ್ಕಾರ ನಮಗೆ ವಿಚಾರಣೆ ಮಾಡುವುದಕ್ಕೆ ಬರುವುದಿಲ್ಲವೆಂದರೆ ಏನರ್ಥ?

ಅಧ್ಯಕ್ಷರು :– ಉತ್ತರ ಹೇಳುವುದಕ್ಕೆ ಬಿಡಿ.

ಶ್ರೀ ಗೋವಿಂದ ಎಂ. ಕಾರಜೋಳ (ಮಾನ್ಯ ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) :– ಸರ್ಕಾರ ಅವರನ್ನು ವಿಚಾರಣೆ ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳಲಿಲ್ಲ ರಾಷ್ಟ್ರೀಕೃತ ಬ್ಯಾಂಕುಗಳಾಗಿರುವುದರಿಂದ ಭಾರತ ಸರ್ಕಾರದ ಆಡಳಿತಕ್ಕೆ ಒಳಪಟ್ಟಿವೆ. ಕೇಂದ್ರ ಸರ್ಕಾರಕ್ಕೆ ಪತ್ರ ಬರೆದು ವಿನಂತಿಯನ್ನು ಮಾಡುತ್ತೇವೆ ಎಂಬ ಉತ್ತರವನ್ನು ಕೊಟ್ಟಿದ್ದೇವೆ.

ಅಧ್ಯಕ್ಷರು :– ಇದು ಗಮನ ಸೆಳೆಯುವ ಸೂಚನೆ. Please

ಶ್ರೀ ಪ್ರಕಾಶ್ ಬಾಬಣ್ಣ ಹುಕೇರಿ :– ಇದು ರೈತರಿಗೆ ಸಂಬಂಧಿಸಿದ ವಿಚಾರವಾಗಿದೆ.

ಅಧ್ಯಕ್ಷರು:– ಇಲ್ಲ. ಇದು calling attention, please

5. ಪ್ರಕಟಣೆ

ಅಧ್ಯಕ್ಷರು :– 13ನೇ ವಿಧಾನಸಭೆಯ ಎಲ್ಲಾ ಮಾನ್ಯಸದಸ್ಯರುಗಳ ಗ್ರೂಪ್ ಫೋಟೋವನ್ನು ತೆಗೆಸಲು ತೀರ್ಮಾನಿಸಲಾಗಿದೆ. ಆದ್ದರಿಂದ ದಿನಾಂಕ 13.2.2013 ರ ಬುಧವಾರದಂದು ಅಂದರೆ ನಾಳೆ ಬೆಳಿಗ್ಗೆ 10.30 ಗಂಟೆಗೆ